# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | WEDNESDAY | 27-7-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಇಂಡೋನೇಶಿಯಾದಿಂದ 1 ಮಿಲಿಯನ್ ಟನ್ ಪಾಮೆಣ್ಣೆ ಆಮದು ಮಾಡಲಿರುವ ಚೀನಾ

ಚೀನಾ, ಇಂಡೋನೇಶಿಯಾದಿಂದ 1 ಮಿಲಿಯನ್ ಟನ್ ಪಾಮೆಣ್ಣೆ ಆಮದು ಮಾಡಿಕೊಳ್ಳಲಿದೆಯೆನ್ನಲಾಗಿದೆ. ದಾಸ್ತಾನು ಹೆಚ್ಚಿರುವುದರಿಂದ ಇಂಡೋನೇಶಿಯಾ ಮಾರಾಟ ನಿರ್ಬಂಧಗಳನ್ನು ಸಡಿಲಿಸಿ ಹೆಚ್ಚಿನ ಮಾರಾಟ, ರಫ್ತಿಗೆ ಪೂರಕ ಕ್ರಮಗಳನ್ನು ಕೈಗೊಳ್ಳುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಪಾಮೆಣ್ಣೆಗೆ ದರ ಇನ್ನೂ ಇಳಿಕೆಯಾಗಲಿದೆಯೆನ್ನಲಾಗಿದೆ.

### ಹೆಚ್ಚಿದ ದೇಶೀ ದರದಿಂದ ಜೋಳ ರಫ್ತು ಇಳಿಕೆ

ಭಾರತದಲ್ಲಿ ಸ್ಥಳೀಯ ಜೋಳ ದರ ಹೆಚ್ಚಳದಲ್ಲಿದ್ದು, ಅಂತಾರಾಷ್ಟ್ರೀಯ ಜೋಳ ದರಕ್ಕಿಂತ ದುಬಾರಿಯಾಗಿದೆ. ಇದರಿಂದ ಭಾರತದ ಜೋಳ ರಫ್ತು ಆಕರ್ಷಣೆ ಕಳೆದುಕೊಂಡಿದ್ದು ರಫ್ತು ಗಣನೀಯ ಇಳಿಕೆಯಾಗಿದೆಯೆನ್ನಲಾಗಿದೆ. USDA ಒಣಹವೆಯಿಂದ ಜೋಳ ಬೆಳೆಯ ಸ್ಥಿತಿ ಹಾನಿಗೊಳಪಡುವ ವರದಿಯಿಂದ ಚಿಕಾಗೋ ಜೋಳ ದರ ಹೆಚ್ಚಳವಾಗಿದೆ. ಆದರೆ 2022 ಸೆಪ್ಟೆಂಬರ್‌ನಲ್ಲಿ ಅಲ್ಲಿನ ಬೆಳೆ ಕಟಾವಾಗಲಿದ್ದು, 2022-23 ರಲ್ಲಿ ಬೇಡಿಕೆ ಇಳಿಕೆ ಹಾಗೂ ಉತ್ತಮ ಪೂರೈಕೆಯ ಅಂದಾಜು ಮಾಡಲಾಗಿದೆಯೆನ್ನಲಾಗಿದೆ.